# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ - 590 018, ಕರ್ನಾಟಕ ರಾಜ್ಯ, ಭಾರತ

ದೂರವಾಣಿ : (0831) 2405468
ಫ್ಯಾಕ್ಸ್ : (0831) 2405467
ಇಮೇಲ್ : registrar@vtu.ac.in
ವೆಬ್‌ಸೈಟ್ : www.vtu.ac.in

ಡಾ.ಹೆಚ್.ಎನ್.ಜಗನ್ನಾಥ ರೆಡ್ಡಿ ಬಿ.ಇ.,ಎಂ.ಇ.,ಪಿಹೆಚ್.ಡಿ.
ಕುಲಸಚಿವರು


ಉಲ್ಲೇಖ ಸಂ. : ವಿತಾವಿ/ಪಿಎಸ್/2017-18/ 3152 ದಿನಾಂಕ : 22 JUL 2017

## ಸುತ್ತೋಲೆ

ವಿಷಯ: ಮಾದಕ ವಸ್ತುಗಳ ಸೇವನೆಯಿಂದ ಆಗುತ್ತಿರುವ ದುಷ್ಪರಿಣಾಮಗಳು ಹಾಗೂ ಅವುಗಳ ನಿಯಂತ್ರಿಸುವ ಕುರಿತಂತೆ ಉನ್ನತ ಶಿಕ್ಷಣ ಇಲಾಖೆಯಲ್ಲಿ ಕೈಗೊಂಡ ಕ್ರಮದ ಅನುಪಾಲನಾ ವರದಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ಸಾಮಾನ್ಯ-2 & ವಿಶ್ವವಿದ್ಯಾಲಯಗಳು-2) ಬೆಂಗಳೂರ ಇವರ ಪತ್ರ ಸಂಖ್ಯೆ:ಇಡಿ 45 ವಿವಿಧ 2017, ದಿ:14.07/2017.

2. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು) ಬೆಂಗಳೂರು ಪತ್ರ ಸಂಖ್ಯೆ:ಒಇ 11 ಪಿಎಸ್‌ಡಿ 2017, ದಿ:30.06.2017

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ, ತಮಗೆ ತಿಳಿಸುವುದೇನೆಂದರೆ, ಮಾದಕ ವಸ್ತುಗಳ ಸೇವನೆಯಿಂದ ಆಗುತ್ತಿರುವ ದುಷ್ಪರಿಣಾಮಗಳನ್ನು ಹಾಗೂ ಅವುಗಳನ್ನು ನಿಯಂತ್ರಿಸುವ ಕುರಿತಂತೆ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ ಇವರ ಅಧ್ಯಕ್ಷತೆಯ ದಿ:18.03.2017ರ ಸಭಾ ನಡವಳಿಯಲ್ಲಿನ ನಿರ್ದೇಶನ/ಸೂಚನೆಗಳನ್ವಯಗಳ (ಪ್ರತಿ ಲಗತ್ತಿಸಲಾಗಿದೆ) ಕುರಿತು ತುರ್ತಾಗಿ ಸೂಕ್ತಕ್ರಮ ಕೈಗೊಂಡು, ಕ್ರಮಕೈಗೊಂಡ ಬಗ್ಗೆ ಅನುಪಾಲನಾ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾದ ನಮೂನೆಯಲ್ಲಿ ಸೂಕ್ತ ಮಾಹಿತಿಯೊಂದಿಗೆ ಭರ್ತಿ ಮಾಡಿ ಕೂಡಲೇ ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ಸಾಮಾನ್ಯ-2 & ವಿಶ್ವವಿದ್ಯಾಲಯಗಳು-2), ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಕಳುಹಿಸಿಕೊಡುವುದು ಹಾಗೂ ಇದರ ಒಂದು ಪ್ರತಿಯನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡಬೇಕೆಂದು ಸೂಚಿಸಲಾಗಿದೆ.

ಆದೇಶದ ಮೇರೆಗೆ

22-07-17

ಕುಲಸಚಿವರು

ಅಡಕ:ಮೇಲಿನಂತೆ.

ಇವರಿಗೆ,

1. ಪ್ರಾಚಾರ್ಯರು, ವಿ.ತಾ.ವಿ.ಯ ಎಲ್ಲ ಸಂಯೋಜನೆಹೊಂದಿದ ಹಾಗೂ ಘಟಕ ತಾಂತ್ರಿಕ ಮಹಾವಿದ್ಯಾಲಯಗಳು.
2. ಸ್ನಾತಕೋತ್ತರ ಸಂಯೋಜಕರು, ಬೆಂಗಳೂರು, ಬೆಳಗಾವಿ, ಕಲಬುರಗಿ ಹಾಗೂ ಮೈಸೂರು ಸ್ನಾತಕೋತ್ತರ ಕೇಂದ್ರಗಳು.

ಪ್ರತಿ ಇವರಿಗೆ,

1. ಪ್ರಾದೇಶಿಕ ನಿರ್ದೇಶಕರು (ಪ್ರಭಾರಿ), ವಿ.ತಾ.ವಿ.ಯ ಬೆಂಗಳೂರು, ಬೆಳಗಾವಿ, ಕಲಬುರಗಿ ಹಾಗೂ ಮೈಸೂರು ಪ್ರಾದೇಶಿಕ ಕೇಂದ್ರಗಳು.
2. ಕುಲಪತಿಗಳ ಕಾರ್ಯದರ್ಶಿಗಳು, ವಿ.ತಾ.ವಿ, ಬೆಳಗಾವಿ.

# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 45 ವಿವಿಧ 2017

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:14/07/2017

**ತುರ್ತು**

ಇಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
**ಬೆಂಗಳೂರು – 560 001.**

ಇವರಿಗೆ:

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು–560 001.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು–560 001.
3. ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560 056.
4. ಕುಲಸಚಿವರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು–570 005.
5. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–580 003.
6. ಕುಲಸಚಿವರು, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗ–585 106.
7. ಕುಲಸಚಿವರು, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು–574 199.
8. ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಬಿ.ಆರ್. ಪ್ರಾಜೆಕ್ಟ್–577 451.
9. ಕುಲಸಚಿವರು, ತುಮಕೂರು ವಿಶ್ವವಿದ್ಯಾಲಯ, ತುಮಕೂರು–572 101
10. ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ–583 276.
11. ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು–570 006.
12. ಕುಲಸಚಿವರು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ–586 101
13. ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾಂ–590 014.
14. ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾಂ.
15. ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.
16. ಕುಲಸಚಿವರು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
17. ಕುಲಸಚಿವರು, ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು.
18. ಕುಲಸಚಿವರು, ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು –560 018.
19. ಕುಲಸಚಿವರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ವಿಜಯನಗರ, ಬೆಂಗಳೂರು.

22 JUL 2017

RECEIVED AT THE
OFFICE OF THE REGISTRAR
22 JUL 2017

ಮಾನ್ಯರೇ,

ವಿಷಯ: ಮಾದಕ ವಸ್ತುಗಳ ಸೇವನೆಯಿಂದ ಆಗುತ್ತಿರುವ ದುಷ್ಪರಿಣಾಮಗಳು ಹಾಗೂ ಅವುಗಳನ್ನು ನಿಯಂತ್ರಿಸುವ ಕುರಿತಂತೆ ಉನ್ನತ ಶಿಕ್ಷಣ ಇಲಾಖೆಯಲ್ಲಿ ಕೈಗೊಂಡ ಕ್ರಮದ ಅನುಪಾಲನಾ ವರದಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ(ಪೊಲೀಸ್ ಸೇವೆಗಳು-ಬಿ) ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ:ಒಇ 11 ಪಿಎನ್ ಡಿ 2017 ದಿನಾಂಕ:30.06.2017.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರ ಹಾಗೂ ಅದರ ಅಡಕದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಮಾದಕ ವಸ್ತುಗಳ ಸೇವನೆಯಿಂದ ಆಗುತ್ತಿರುವ ದುಷ್ಪರಿಣಾಮಗಳು ಮತ್ತು ಅವುಗಳನ್ನು ನಿಯಂತ್ರಿಸುವ ಕುರಿತಂತೆ ಈ ಪತ್ರದೊಂದಿಗೆ ಲಗತ್ತಿಸಿರುವ ದಿನಾಂಕ:18.3.2017ರ ಸಭಾ ನಡವಳಿಯಲ್ಲಿನ ನಿರ್ದೇಶನ/ಸೂಚನೆಗಳನ್ವಯ ತಮ್ಮ ಅಧೀನ ಇಲಾಖೆ/ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಲ್ಲಿ ತುರ್ತಾಗಿ ಸೂಕ್ತಕ್ರಮ ಕೈಗೊಂಡು, ಕ್ರಮಕೈಗೊಂಡ ಬಗ್ಗೆ ಅನುಪಾಲನಾ ವರದಿಯನ್ನು ನಮೂನೆಯಲ್ಲಿನ ಸೂಕ್ತ ಮಾಹಿತಿಯೊಂದಿಗೆ ಕೂಡಲೇ ಸರ್ಕಾರಕ್ಕೆ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎಂ.ಎ.ಅಹಮದ್ ಜಾನ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ಸಾಮಾನ್ಯ-2 & ವಿಶ್ವವಿದ್ಯಾಲಯಗಳು-2)

C.no - 12565/2017
03/07/17

<u>ಕರ್ನಾಟಕ ಸರ್ಕಾರ</u>

ಸಂಖ್ಯೆ: ಒಇ 11 ಪಿಎನ್‌ಡಿ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:30.06.2017

<u>**ಅನಧಿಕೃತ ಟಿಪ್ಪಣಿ**</u>

**ವಿಷಯ:** ಮಾದಕ ವಸ್ತುಗಳ ಸೇವನೆಯಿಂದ ಆಗುತ್ತಿರುವ ದುಷ್ಪರಿಣಾಮಗಳು ಹಾಗೂ ಅವುಗಳನ್ನು ನಿಯಂತ್ರಿಸುವ ಕುರಿತಂತೆ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:18.03.2017ರಂದು ನಡೆದ ಸಭೆಯ ನಡವಳಿ ಕುರಿತು.

ಉಲ್ಲೇಖ: ಅನಧಿಕೃತ ಟಿಪ್ಪಣಿ ಸಂಖ್ಯೆ: ದಿನಾಂಕ:.27.03.2017

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಇದೇ ಸಮ ಸಂಖ್ಯೆಯ ಅನಧಿಕೃತ ಟಿಪ್ಪಣಿ ದಿನಾಂಕ:27.03.2017ರ ಕಡೆಗೆ ಗಮನ ಸೆಳೆಯಲಾಗಿದೆ. ಸದರಿ ಟಿಪ್ಪಣಿಯಲ್ಲಿ ಕೋರಿರುವಂತೆ ಕ್ರಮಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ಅನುಪಾಲನಾ ವರದಿಯು ಶಿಕ್ಷಣ ಇಲಾಖೆಯಿಂದ ಇದುವರೆಗೂ ಈ ಇಲಾಖೆಯಲ್ಲಿ ಸ್ವೀಕೃತಗೊಳ್ಳದೇ ಇರುವ ಕಾರಣ ಈಗಲಾದರೂ ಅನುಪಾಲನಾ ವರದಿಯನ್ನು ಈ ಇಲಾಖೆಗೆ ಕಳುಹಿಸಿಕೊಡುವಂತೆ ಶಿಕ್ಷಣ ಇಲಾಖೆಯನ್ನು ಈ ಮೂಲಕ ಕೋರಲಾಗಿದೆ. (ಪ್ರತಿ ಲಗತ್ತಿಸಿದೆ)

ಉ.ಕಾ (ಸಾಮಾನ್ಯ - 2)

T. Krishnaiah
(ಟಿ.ಕೃಷ್ಣಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ
(ಪೋಲೀಸ್ ಸೇವೆಗಳು-ಬಿ)
ದೂರವಾಣಿ ಸಂಖ್ಯೆ: 22033294
30/06/17

**ಇವರಿಗೆ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
ಎಂ.ಎಸ್.ಬಿಲ್ಡಿಂಗ್ , ಬೆಂಗಳೂರು

SO (UM) ...

04/07/17

05/07/17

**ಮಾದಕ ವಸ್ತುಗಳ ಸೇವನೆಯಿಂದ ಆಗುತ್ತಿರುವ ದುಷ್ಪರಿಣಾಮಗಳು ಹಾಗೂ ಅವುಗಳನ್ನು ನಿಯಂತ್ರಿಸುವ ಕುರಿತಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 18.03.2017 ರಂದು ಅಪರಾಹ್ನ 4:15 ಗಂಟೆಗೆ ನಡೆದ ಸಭೆಯ ನಡವಳಿ.**

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ.
2) ಉಪ ಪೊಲೀಸ್ ಮಹಾ ನಿರೀಕ್ಷಕರು, ಸಿ.ಐ.ಡಿ. (ಆರ್ಥಿಕ ಅಪರಾಧಗಳು), ಬೆಂಗಳೂರು.
3) ಹೆಚ್ಚುವರಿ ಪೊಲೀಸ್ ಆಯುಕ್ತರು (ಅಪರಾಧಗಳು), ಬೆಂಗಳೂರು.
4) ಅಪರ ಆರಕ್ಷಕ ಮಹಾ ನಿರ್ದೇಶಕರು (ಅಪರಾಧಗಳು), ಬೆಂಗಳೂರು.
5) ಅಪರ ಪ್ರಾದೇಶಿಕ ವಿದೇಶಿಯರ ನೋಂದಣಾಧಿಕಾರಿಗಳು, ಬೆಂಗಳೂರು.
6) ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು.

* * * * *

ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಆಹ್ವಾನಿಸಿದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ರಾಜ್ಯದಲ್ಲಿ ಅದರಲ್ಲೂ ಪ್ರಮುಖವಾಗಿ ಬೆಂಗಳೂರಿನಲ್ಲಿ ಮಾದಕ ವಸ್ತುಗಳ ಮಾರಾಟ ಮತ್ತು ಸೇವನೆ ಪ್ರಕರಣಗಳು ಹೆಚ್ಚುತ್ತಿದ್ದು, ಜನ ಪ್ರತಿನಿಧಿಗಳು ಈ ಬಗ್ಗೆ ತಮ್ಮ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಕಳೆದ 3 ವಿಧಾನಮಂಡಲ ಅಧಿವೇಶನಗಳಲ್ಲಿ ಮಾದಕ ವಸ್ತುಗಳ ಮಾರಾಟ ಮತ್ತು ಸೇವನೆ ಬಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರಶ್ನೆಗಳು ಹಾಗೂ ಗಮನಸೆಳೆಯುವ ಸೂಚನೆಗಳು ಸ್ವೀಕೃತವಾಗಿವೆ. ದಿನಾಂಕ: 16.06.2017 ರಂದು ಮಾನ್ಯ ಗೃಹ ಸಚಿವರು, ಕರ್ನಾಟಕ ವಿಧಾನ ಪರಿಷತ್ತಿನ ಚುಕ್ಕೆ ಗುರುತಿನ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ 'ಗೋವಾದಲ್ಲಿ ಮಾದಕ ವಸ್ತುಗಳ ಮಾರಾಟ ಜಾಲದಲ್ಲಿ ಭಾಗಿಯಾಗಿದ್ದ ವಿದೇಶಿಯರನ್ನು ಗಡಿಪಾರು ಮಾಡಲು ಅವರ ವಿರುದ್ಧ ದಾಖಲಾದ ಪ್ರಕರಣಗಳನ್ನು ತಕ್ಷಣ ಕೈಬಿಡಲಾಗುತ್ತಿದೆ. ಈ ಬಗ್ಗೆ ವರದಿಯನ್ನು ಪಡೆದು ಪರಿಶೀಲಿಸಿ ರಾಜ್ಯದಲ್ಲೂ ಸಹ ಅಂತಹ ವ್ಯವಸ್ಥೆ ಅಳವಡಿಸಿಕೊಳ್ಳಲು ಪ್ರಯತ್ನಿಸಲಾಗುವುದು' ಎಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸಭೆಯನ್ನು ಕರೆಯಲಾಗಿದೆ ಎಂದು ತಿಳಿಸಿದರು. ವಿವರವಾದ ಚರ್ಚೆಯ ಬಳಿಕ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು:

1. ಮಾದಕ ವಸ್ತುಗಳ ಮಾರಾಟ ಜಾಲದಲ್ಲಿ ಭಾಗಿಯಾಗಿದ್ದ ವಿದೇಶಿಯರನ್ನು ಗಡಿಪಾರು ಮಾಡಲು 'ಗೋವಾ ಮಾದರಿ' ಬಗ್ಗೆ ಡಿಜಿ & ಐಜಿಪಿ ರವರಿಂದ ವರದಿಯೊಂದನ್ನು ಪಡೆದು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ನಿರ್ಣಯ ತೆಗೆದುಕೊಳ್ಳುವುದು.

2. ಮಾದಕ ವಸ್ತುಗಳ ವಿರುದ್ಧ ಸರ್ಕಾರದ ಹಲವು ಇಲಾಖೆಗಳು ಹಲವು ಕಾರ್ಯಕ್ರಮಗಳನ್ನು ಕೈಗೊಂಡಿವೆ. ಆದರೆ ಪ್ರತಿಯೊಂದು ಇಲಾಖೆಯು ಪ್ರತ್ಯೇಕವಾಗಿ ಕ್ರಮವಹಿಸುತ್ತಿರುವುದರಿಂದ ಅವುಗಳ ಒಟ್ಟಾರೆ ಪರಿಣಾಮ ಕಂಡುಬರುತ್ತಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲಾ ಸಂಬಂಧಿತ ಇಲಾಖೆಗಳು ಒಟ್ಟಾಗಿ ತಮ್ಮಲ್ಲಿ ಲಭ್ಯವಿರುವ ಮಾಹಿತಿಗಳನ್ನು ಹಂಚಿಕೊಂಡು ಪರಸ್ಪರ ಪೂರಕವಾಗಿ ಕ್ರಮವಹಿಸುವುದು.

...2

3. ಕಳೆದ 10. ವರ್ಷಗಳಲ್ಲಿ ಬೆಂಗಳೂರಿಗೆ ಆಗಮಿಸಿರುವ ವಿದೇಶಿ ವಿದ್ಯಾರ್ಥಿಗಳ ಪಟ್ಟಿಯನ್ನು ಶಿಕ್ಷಣ ಇಲಾಖೆ ಮತ್ತು ಪ್ರಾದೇಶಿಕ ವಿದೇಶಿಯರ ನೋಂದಣಾಧಿಕಾರಿಗಳು, ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ 10 ದಿನಗಳ ಕಾಲಾವಧಿಯಲ್ಲಿ ಒದಗಿಸುವುದು. ಇದನ್ನು ಆಧರಿಸಿ ಪೊಲೀಸ್ ಆಯುಕ್ತರ ಕಛೇರಿಯಲ್ಲಿ ಅವರ ಬಳಿಯಿರುವ ಡಾಟಾ ಬೇಸ್ ಅನ್ನು ನವೀಕರಣಗೊಳಿಸಿಕೊಳ್ಳುವುದು. ಅಲ್ಲದೇ, ಪೊಲೀಸ್ ಇಲಾಖೆಯಿಂದ ಈ ವಿದ್ಯಾರ್ಥಿಗಳು ತಾವು ಈ ಮೊದಲು ನೀಡಿರುವ ವಿಳಾಸಗಳಲ್ಲಿ ವಾಸವಾಗಿದ್ದಾರೆಯೇ? ಎಂಬ ಬಗ್ಗೆ ಪರಿಶೀಲನೆ ನಡೆಸುವುದು. ಮಾಹಿತಿ ನೀಡಬೇಕಾದ ಮಾದರಿಯನ್ನು ಲಗತ್ತಿಸಿದೆ.

4. ಶಾಲಾ ಕಾಲೇಜುಗಳ ಬಳಿ ಸಿಗರೇಟು ಮಾರಾಟದ ಪೆಟ್ಟಿಗೆ ಅಂಗಡಿಗಳು ಮಾದಕ ವಸ್ತುಗಳನ್ನು ಪೂರೈಸುತ್ತಿರುವುದನ್ನು ಗಮನಿಸಲಾಗಿದೆ. ಅಲ್ಲದೇ, COTPA ಕಾಯ್ದೆಯನ್ನು ಉಲ್ಲಂಘಿಸಿ 100 ಮೀ. ವ್ಯಾಪ್ತಿಯೊಳಗೆ ಈ ಅಂಗಡಿಗಳನ್ನು ನಡೆಸುತ್ತಿರುವುದು ಗಮನಕ್ಕೆ ಬಂದಿದೆ. ಶಾಲಾ ಕಾಲೇಜು ವಿದ್ಯಾರ್ಥಿಗಳು ಮಾದಕ ವಸ್ತುಗಳ ಸೇವನೆಯ ಪ್ರಾರಂಭಿಸಲು ಈ ಅಂಗಡಿಗಳು ಪ್ರಾರಂಭಿಕ ಸ್ಥಳಗಳಾಗಿರುವುದರಿಂದ COTPA ಕಾಯ್ದೆ ಅಡಿಯಲ್ಲಿ ವಿಶೇಷ ಕಾರ್ಯಚರಣೆಯನ್ನು ಹಮ್ಮಿಕೊಳ್ಳಲು ನಗರಾಭಿವೃದ್ಧಿ ಮತ್ತು ಬಿ.ಬಿ.ಎಂ.ಪಿ. ಯನ್ನು ಕೋರುವುದು.

5. ಮಾದಕ ವಸ್ತುಗಳ ಮಾರಾಟದ ಬಗ್ಗೆ ಗೌಪ್ಯವಾದ ಮಾಹಿತಿ ಒದಗಿಸಲು ಅನುಕೂಲವಾಗುವಂತೆ 4 ಅಂಕಿಗಳ ದೂರವಾಣಿ ಸಂಖ್ಯೆಯನ್ನು ಪ್ರಾರಂಭಿಸಿ ವಿಶೇಷ ಪ್ರಚಾರ ನೀಡುವುದು. ನಗರದ ಹುಕ್ಕಾ ಬಾರ್‌ಗಳೂ ಸಹ ಮಾದಕ ವಸ್ತು ಬಳಕೆ ತಾಣಗಳಾಗುತ್ತಿರುವುದರಿಂದ ಅವುಗಳ ಮೇಲೆ ನಿಗಾ ಇರಿಸುವುದು.

6. ಒಟ್ಟು 617 ಮಾದಕ ವಸ್ತು ಪ್ರಕರಣಗಳು ನ್ಯಾಯಾಲಯಗಳಲ್ಲಿ ಬಾಕಿಯಿದ್ದು, ಅವುಗಳ ಯಶಸ್ವಿ ನಿರ್ವಹಣೆ ಬಗ್ಗೆ ನಿರಂತರವಾದ ಮೇಲ್ವಿಚಾರಣೆ ನಡೆಸುವ ಅಗತ್ಯವಿದೆ. ಅಭಿಯೋಗ ನಿರ್ದೇಶಕರು ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾಹಿತಿ ಕ್ರೋಢೀಕರಣಕ್ಕೆ ಒಂದು Format ಅನ್ನು ಸಿದ್ಧಪಡಿಸಿ 1 ತಿಂಗಳ ಅವಧಿಯ ಒಳಗಾಗಿ ಪೂರ್ಣ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.

7. ಹೆಚ್ಚಾಗಿ ನೈಜೀರಿಯನ್ ಮೂಲದ ವಿದೇಶಿಯರು ಪಾಸ್‌ಪೋರ್ಟ್‌ನ್ನು ನಕಲು ಮಾಡುವುದರಲ್ಲಿ ಪರಿಣಿತರಾಗಿದ್ದು, ಪ್ರಾದೇಶಿಕ ವಿದೇಶಿಯರ ನೋಂದಣಾಧಿಕಾರಿಗಳ ಸಹಕಾರದೊಂದಿಗೆ ಪಾಸ್‌ಪೋರ್ಟ್‌ಗಳ ನೈಜತೆಯನ್ನು ನಗರ ಪೊಲೀಸರು ಪರಿಶೀಲಿಸಲು ಕ್ರಮವಹಿಸುವುದು.

8. ಪ್ರಸ್ತುತ 2 ವಾರಗಳಿಗಿಂತ ಜಾಸ್ತಿ ಕಾಲ ವಿದೇಶಿ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗದಿದ್ದಲ್ಲಿ, ಅದನ್ನು ಪ್ರಾದೇಶಿಕ ವಿದೇಶಿಯರ ನೋಂದಣಾಧಿಕಾರಿಗಳಿಗೆ ಶಿಕ್ಷಣ ಸಂಸ್ಥೆಯು ವರದಿ ಮಾಡುವ ವ್ಯವಸ್ಥೆಯಿರುತ್ತದೆ. ಈ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಿ ಕನಿಷ್ಠ 3 ತಿಂಗಳಿಗೆ 1 ಬಾರಿ ವಿದೇಶಿ ವಿದ್ಯಾರ್ಥಿಗಳು ತಾವು ನೆಲೆಸಿರುವ ಮಾಹಿತಿಯನ್ನು ನಗರ ಪೊಲೀಸರಿಗೆ ಅಥವಾ ಪ್ರಾದೇಶಿಕ ವಿದೇಶಿಯರ ನೋಂದಣಾಧಿಕಾರಿಗಳಿಗೆ ಒದಗಿಸುವಂತೆ ವ್ಯವಸ್ಥೆ ಕಲ್ಪಿಸಲು ಕ್ರಮವಹಿಸುವುದು.

9. ಕಾನೂನುಬಾಹಿರ ಕೃತ್ಯಗಳಲ್ಲಿ ಭಾಗವಹಿಸುವ ವಿದೇಶಿಯರು ಪೂರ್ಣ ಬಯೋ ಮೆಟ್ರಿಕ್ ಮಾಹಿತಿಯನ್ನು ಸಂಗ್ರಹಿಸುವಂತೆ ಸೂಚಿಸಲಾಯಿತು. ಇದರಿಂದ 'ಬ್ಲ್ಯಾಕ್ ಲಿಸ್ಟ್'ಗೆ ಒಳಗಾಗುವ ವಿದೇಶಿಯರು ಮತ್ತೆ ಭಾರತವನ್ನು ಪ್ರವೇಶಿಸುವ ಸಂದರ್ಭದಲ್ಲಿ ಪೂರ್ಣ ಮಾಹಿತಿ ಲಭ್ಯವಾಗುತ್ತದೆ.

...3

ಇನ್ನು 1 ತಿಂಗಳ ಬಳಿಕ ಇದೇ ಸದಸ್ಯರನ್ನು ಒಳಗೊಂಡ ಮತ್ತೊಂದು ಸಭೆಯನ್ನು ಕರೆಯುವುದಾಗಿ ತಿಳಿಸಿದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಸದರಿ ಅವಧಿಯಲ್ಲಿ ಈ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಬಗ್ಗೆ ಕ್ರಮವಹಿಸಿ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಸೂಚಿಸಿದರು. ಸಭೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಇವರಾಗಲೀ ಅಥವಾ ಅವರ ಪ್ರತಿನಿಧಿಯಾಗಲೀ ಹಾಜರಿರದಿದ್ದ ಕಾರಣ ಈ ಎಲ್ಲಾ ಅಂಶಗಳನ್ನು ದೂರವಾಣಿಯ ಮುಖಾಂತರ ಅವರೊಂದಿಗೆ ಚರ್ಚಿಸುವುದಾಗಿ ತಿಳಿಸಿದ್ದು, ಅದರಂತೆ ಕ್ರಮವಹಿಸಲಾಗಿದೆ.

ವಂದನೆಗಳೊಂದಿಗೆ ಅಧ್ಯಕ್ಷರು ಸಭೆಯನ್ನು ಮುಕ್ತಾಯಗೊಳಿಸಿದರು.

ಒಇ 11 ಪಿಎನ್‌ಡಿ 2017

(ಸುಭಾಷ್ ಚಂದ್ರ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಒಳಾಡಳಿತ ಇಲಾಖೆ

.......................

## Details required from FRRO & Education department.

1) FRRO Format:

| Sl No | Name of the foreigner with Photograph, contact phone number | Country | Passport Number & Validity | Type of Visa (Business/ Medical/ Student/others | Date of Arrival. | Whether he/she has valid RP or over staying |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |

**2) Education department format:**

| Sl No | Name of the Institute | Name of the foreign student with Photograph& Present address, contact phone number | Course admitted and date of admission | Passport Number and Visa Number with Validity | Remarks |
|---|---|---|---|---|---|
| 1 | 2 | 3 | 4 | 5 | 6 |
| | | | | | |